# ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ಎಫ್.ಟಿ.ಎಸ್.ಸಿ.-1, ಹಾವೇರಿ.
# ಎಸ್.ಸಿ. ನಂ. 18/2020

PW-19
CW-07

ಸಾಕ್ಷಿದಾರರ ಹೆಸರು: ಶರೀಫ್ ಪಕ್ರುಸಾಬ ನದಾಫ್

ತಂದೆ ಹೆಸರು: ಪಕ್ರುಸಾಬ ನದಾಫ್

ವಯಸ್ಸು: 49

ಉದ್ಯೋಗ: ವ್ಯವಸಾಯ ,

ವಾಸ ಸ್ಥಳ: ಚಾಕಾಪೂರ , ಶಿಗ್ಗಾಂವ

ದಿನಾಂಕ: **25.07.2025** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯ್ತು.

<u>ಮುಖ್ಯ ವಿಚಾರಣೆ ವಿಶೇಷ ಸರ್ಕಾರಿ ಅಭಿಯೋಜಕರಿಂದ:</u>

1) ಪ್ರಾಸಾ-18 ನಾಗರಾಜ ನನಗೆ ಪರಿಚಯ. ಪೋಲಿಸರು ಯಾರು ಎಲ್ಲಿ ನನ್ನನ್ನು ಕರೆಸಿಲ್ಲ ಹಾಗೂ ನನ್ನ ಮುಂದೆ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನನ್ನ ಮುಂದೆ ಯಾವುದೇ ಪಂಚನಾಮೆ ಜರುಗಿಸಿಲ್ಲ.

2) ನಾನು ಈಗ ನೋಡುತ್ತಿರುವ ದಾಖಲೆಯ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಯಾವ ವಿಷಯಕ್ಕಾಗಿ ಈ ದಾಖಲೆಯಲ್ಲಿ ಸಹಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯು ಅಮಾನತ್ತು ಪಂಚನಾಮೆಯಾಗಿದ್ದು ಅದನ್ನು ಈಗಾಗಲೆ ನಿಪಿ-17 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-17(ಬಿ) ಎಂದು ಗುರುತಿಸಲಾಯಿತು.

3) ನಾನು ಈಗ ನೋಡುತ್ತಿರುವ ಇನ್ನೊಂದು ದಾಖಲೆಯ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಯಾವ ವಿಷಯಕ್ಕಾಗಿ ಈ ದಾಖಲೆಯಲ್ಲಿ ಸಹಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯು ಘಟನಾ ಸ್ಥಳದ ಅಮಾನತ್ತು ಪಂಚನಾಮೆಯಾಗಿದ್ದು ಅದರ ಮೇಲಿರುವ ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ ಕಾರಣ ಅದನ್ನು ಈಗಾಗಲೆ ನಿಪಿ-18 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-18(ಬಿ) ಎಂದು ಗುರುತಿಸಲಾಯಿತು. ಛಾಯಾಚಿತ್ರಗಳಲ್ಲಿರುವ ವ್ಯಕ್ತಿ ಯಾರು ಎಂದು ನನಗೆ ಗೊತ್ತಿಲ್ಲ.

4) ನಾನು ಈಗ ನೋಡುತ್ತಿರುವ ಮತ್ತೊಂದು ದಾಖಲೆಯ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಯಾವ ವಿಷಯಕ್ಕಾಗಿ ಈ ದಾಖಲೆಯಲ್ಲಿ ಸಹಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯು ಅಮಾನತ್ತು ಪಂಚನಾಮೆಯಾಗಿದ್ದು ಅದನ್ನು ಈಗಾಗಲೆ ನಿಪಿ-19 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-19(ಬಿ) ಎಂದು ಗುರುತಿಸಲಾಯಿತು.

5) ನಾನು ಈಗ ನೋಡುತ್ತಿರುವ ಇನ್ನೊಂದು ದಾಖಲೆಯ ಮೇಲೆ ನನ್ನ ಸಹಿ ಇದೆ. ಸದರಿ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಯಾವ ವಿಷಯಕ್ಕಾಗಿ ಈ ದಾಖಲೆಯಲ್ಲಿ ಸಹಿ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ದಾಖಲೆಯು ನೋಟಿಸ ಆಗಿದ್ದು ಅದರ ಮೇಲಿರುವ ಸಹಿಯನ್ನು ಸಾಕ್ಷಿಯು ಗುರುತಿಸಿದ ಕಾರಣ ನಿಪಿ-21 ಎಂದು, ಸಾಕ್ಷಿಯ ಸಹಿಯನ್ನು ನಿಪಿ-21(ಎ) ಎಂದು ಗುರುತಿಸಲಾಯಿತು. ನಾನು ಸದರಿ ಸಹಿಯನ್ನು ಸಿಗ್ನಲ್ ನಲ್ಲಿ ಮಾಡಿರುತ್ತೇನೆ. ಪ್ರಕರಣಕ್ಕೆ ಸಂಬಂದಿಸಿದಂತೆ ನನಗೆ ಹೆಚ್ಚಿನ ಮಾಹಿತಿ ಇಲ್ಲ.

6) ನಾನು ಈಗ ಛಾಯಾಚಿತ್ರದಲ್ಲಿ ನೋಡುತ್ತಿದ್ದ ಬಳೆಗಳನ್ನು ಈ ಹಿಂದೆ ಎಲ್ಲಿಯೂ ನೋಡಿಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಸಾಕ್ಷಿಯ ಹೇಳಿದ ಸಾಕ್ಷಿಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

7) ದಿಃ04.09.2019 ರಂದು ನನ್ನನ್ನು ಹಾಗೂ ಪ್ರಾಸಾ-18 ನಾಗರಾಜ ಇವರನ್ನು ಚಾಸಾ-39 ಚಿದಾನಂದ ಶಿಗ್ಗಾವ ವೃತ್ತ ನೀರಿಕ್ಷಕರ ಕಚೇರಿಗೆ ಕರೆದಿದ್ದು , ಅಲ್ಲಿ ನಮ್ಮ ಸಮಕ್ಷಮ ಮೃತಳ ಒಳಾಂಗಗಳನ್ನು ಹಾಗೂ ಮೃತಳ ಕಪ್ಪು ಬಣ್ಣದ ಲಂಗ , ಕಪ್ಪು ಬಣ್ಣದ ರವಿಕೆ , ಚಾಕಲೇಟ ಬಣ್ಣದ ಹಾಫ್ ಸ್ವೆಟರ್ , ಕೆಂಪು ಬಣ್ಣದ ಸ್ಕಾರ್ಫ , ನೆರಳೆ ಮಿಶ್ರಿತಿ ಗುಲಾಬಿ ಬಣ್ಣದ ಸೀರೆಯನ್ನು ಅಮಾನತ್ತು ಪಡಿಸಿಕೊಂಡು ನಿಪಿ-17 ರಂತೆ ಪಂಚನಾಮೆಯನ್ನು ಮದ್ಯಾಹ್ನ 2.30 ರಿಂದ ಸಂಜೆ 5.30 ವರೆಗೆ ಜರುಗಿಸಿದರು ಎಂದರೆ ಸರಿಯಲ್ಲ. ಮುಮಾ-12 ರಿಂದ 16 ವಸ್ತುಗಳನ್ನು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆಯಲ್ಲಿ ಏನು ಬರೆಯಲಾಗಿದೆ ಎಂದು ತಿಳಿದುಕೊಂಡು ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

8) ದಿಃ 06.09.2019 ರಂದು ಚಾಸಾ-39 ಚಿದಾನಂದ ಇವರು ಮತ್ತೊಮ್ಮೆ ಕರೆಸಿ ನನಗೆ ನಿಪಿ-21 ರಂತೆ ನೊಟಿಸ ಜಾರಿ ಮಾಡಿದ್ದರು ಎಂದರೆ ಸರಿಯಲ್ಲ. ಆರೋಪಿ ನಮ್ಮನ್ನು ಹಾಗೂ ಪೋಲಿಸರನ್ನು ಶಿಗ್ಗಾಂವನ ಬಜಾರ ಓಣಿಯಲ್ಲಿರುವ ಮೃತ ಶಾಂತಾಬಾಯಿಯ ಮನೆಗೆ ಕರೆದುಕೊಂಡು ಹೋಗಿ ಆರೋಪಿ ನಾನು ನನ್ನ ಹೆಂಡತಿ ದಿಃ16.08.2019 ರಂದು ರಾತ್ರಿ 12.00 ರ ಸುಮಾರಿಗೆ ಮನೆಗೆ ಬಂದು ನಮ್ಮದು ಸಾಲ ಬಹಳ ಆಗಿದೆ ನಿನ್ನ ಹತ್ತಿರ ಹಣ ಇದೆ ಅದನ್ನು ಕೊಡು ನಂತರ ನಾವು ಕೊಡುತ್ತೇವೆ ಎಂದು ಕೇಳಿ ಅವಳು ಮನೆಯಲಿ ಹಣ ಇಲ್ಲ ಬ್ಯಾಂಕಿನಲ್ಲಿ ಇಟ್ಟಿರುತ್ತೇವೆ ಎಂದು ಹೇಳಿದಾಗ ಅವಳ ಮೈ ಮೇಲಿನ ಬಂಗಾರದ ಆಬರಣಗಳು ಇದ್ದು , ಅವುಗಳನ್ನು ಕೊಡು ಎಂದು ಕೇಳಿದಾಗ ಶಾಂತಾಬಾಯಿ ಕೊಡಲಿಲ್ಲ ಆಗ ನಾನು ನನ್ನ ಹೆಂಡತಿ ಅವಳ ಮೇಲಿರುವ ಆಬರಣಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದ್ದು ಅವಳು ಕೊಡದೇ ಇದ್ದಾಗ ಅವಳನ್ನು ಮಂಚದ ಮೇಲೆ ಅಂಗಾತವಾಗಿ ಮಲಗಿಸಿ ಅವಳ ಕೈಗಳನ್ನು ಅವರ ಸೀರೆಯಿಂದ ಕಟ್ಟಿ ಕುತ್ತಿಗೆಗೆ ಇಬ್ರು ಸೇರಿ ಸೀರೆಯಿಂದ ಬಿಗಿದು ಕಣ್ಣಿಗೂ ಸಹ ಬಟ್ಟೆ ಕಟ್ಟಿ , ಅವಳು ಕೊಸರುದ್ದಾಗ ನನ್ನ ಹೆಂಡತಿ ಅವಳ ಮೇಲೆ ಹತ್ತಿ ಕುಳಿತು , ನಂತರ ನಾನು ಅವಳನ್ನು ತಲೆದಿಂಬಿನಿಂದ ಉಸಿರುಗಟ್ಟಿಸಿದೆ , ಆಗ ಅವಳು ಸತ್ತಿರುವುದನ್ನು ದೃಡ ಪಡಿಸಿಕೊಂಡು ಅವಳ ಮೈ ಮೇಲೆ ಇದ್ದ 6 ಬಂಗಾರದ ಬಳೆ , ಬಂಗಾರದ ಲಾಕೇಟ ಇರುವ ಚೈನನ್ನು ತೆಗೆದುಕೊಂಡು ಹೋಗಿ ಮನೆಯಲ್ಲಿ ಇಟ್ಟಿರುತ್ತೇವೆ, ಆರೋಪಿ ಹೊಸ್ತಿಲ ಮೇಲೆ ಕೈ ಮಾಡಿ ತೋರಿಸಿ ಇಲ್ಲಿ ದೀಪ ಹಚ್ಚಿತ್ತು ಅಡುಗೆ ಮನೆಯಿಂದ ಗ್ಯಾಸ ಸೀಲೆಂಡರ್ ಆನ್ ಮಾಡಿ, ಗ್ಯಾಸ್ ಹೊರಗೆ ಬರುವಂತೆ ಮಾಡಿದೆನು ಎಂದು ಹೇಳಿ ಅಡುಗೆ ಕೋಣೆಯನ್ನು ತೋರಿಸಿದನು ಆಗ ಪೋಲಿಸರು ನಮ್ಮ ಸಮಕ್ಷಮ ನಿಪಿ-18 ರಂತೆ ಮದ್ಯಾಹ್ನ 1.15 – 2.15 ವರೆಗೆ ಪಂಚನಾಮೆ ಮಾಡಿ , ಛಾಯಾಚಿತ್ರಗಳನ್ನು ತೆಗೆದರು ಎಂದರೆ ಸರಿಯಲ್ಲ.

9) ಆರೋಪಿ ತಾನು ಮುಚ್ಚಿಟ್ಟ ಬಂಗಾರದ ಬಳೆ ಹಾಗೂ ಲಾಕೇಟ ಇದ್ದ ಚೈನನ್ನು ತೋರಿಸುತ್ತೇನೆಂದು ಹೇಳಿ ನಮ್ಮನ್ನೆಲ್ಲ ಶಿಗ್ಗಾಂವನ ಜಯನಗರದಲ್ಲಿರುವ ತನ್ನ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಟ್ರೆಜರಿಯ ಲಾಕರನಲ್ಲಿ ಬಚ್ಚಿಟ್ಟಿದ್ದ ಶಾಂತಾಬಾಯಿಯ 2 ದೊಡ್ಡ ಬಂಗಾರದ ಬಳೆಗಳು 48 ಗ್ರಾಂ, 4 ಸಣ್ಣ ಬಳೆಗಳು 50 ಗ್ರಾಂ ಹಾಗೂ ಲಾಕೇಟ ಇರುವ ಒಂದು ಚೈನ್ 38 ಗ್ರಾಂ 30 ಮಿಲಿ ಇವುಗಳನ್ನು ಪೋಲಿಸರು ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಮದ್ಯಾಹ್ನ 2.30 – 3.50 ವರೆಗೆ ಪಂಚನಾಮೆಯನ್ನು ನಿಪಿ-19 ರಂತೆ ಜರುಗಿಸಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಎರಡು ಛಾಯಾಚಿತ್ರಗಳನ್ನು ತೆಗೆದರು ಎಂದರೆ ಸರಿಯಲ್ಲ.

10) ಆರೋಪಿಯು ಆ ದಿನ ನಮ್ಮ ಮುಂದೆ ಶಾಂತಾಬಾಯಿ ಆಭರಣಗಳನ್ನು ಹಾಜರು ಪಡಿಸಿದ್ದು , ಕೊಲೆ ಮಾಡಿದ ಸ್ಥಳವನ್ನು ತೋರಿಸಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

11) ನನ್ನ ಸಮಕ್ಷಮ ದಿ:04.09.2019 ರಂದು ಪೋಲಿಸರು ಶಾಂತಾಬಾಯಿ ಬಟ್ಟೆ ಹಾಗೂ ಒಳಾಂಗಗಳನ್ನು ಅಮಾನತ್ತು ಪಡಿಸಿಕೊಂಡಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯವಾಗಲೀ ಎಂದು ನ್ಯಾಯಾಲಯದ ಮುಂದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿ ಪರ ಶ್ರೀ ಎಸ್ ಆರ್ ಹೆಚ್ ವಕೀಲರಿಂದ:

12) ಆರೋಪಿ ಪರ ವಕೀಲರು ಈ ಸಾಕ್ಷಿಗೆ ಯಾವುದೇ ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

(ಅಶ್ವಿನಿ ವಿಜಯ ಶಿರಿಯಣ್ಣವರ)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಎಫ್.ಟಿ.ಎಸ್.ಸಿ.-1, ಹಾವೇರಿ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಆರ್ ಹೆಚ್ ವಕೀಲರಿಂದಃ</u>

13)

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

(ಅಶ್ವಿನಿ ವಿಜಯ ಶಿರಿಯಣ್ಣವರ)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಎಫ್.ಟಿ.ಎಸ್.ಸಿ.-1, ಹಾವೇರಿ.

**PW-01**
**CW-01**

ದಿನಾಂಕಃ **12.09.2023** ರಂದು ಸತ್ಯ ಪ್ರತಿಜ್ಞೆ ಬೋಧಿಸಲಾಯ್ತು**.**

**(**ಮಾನ್ಯ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನದಂತೆ ಮತ್ತು ಪೋಕ್ಸೋ ಕಾಯಿದೆಯಡಿ ಈ ಸಾಕ್ಷಿಯ ಹೇಳಿಕೆಯನ್ನು ಇನ್ ಕ್ಯಾಮೇರಾ ಪ್ರೋಸಿಡಿಂಗ್ಸ್ ನಿಯಮದಂತೆ ದಾಖಲಿಸಿಕೊಳ್ಳಲಾಯಿತು**.** ಕರ್ಟನ್ ಹಾಕಲಾಗಿದೆ**. )**

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ

ಆರೋಪಿ ಪರ ವಕೀಲರು ಸಮಯಾವಕಾಶ ಕೇಳಿದ್ದು ಸಕಾರಣಗಳು ಇಲ್ಲದ ಕಾರಣ ಮನವಿಯನ್ನು ತಳ್ಳಿ ಹಾಕಿ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯ್ತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಎಫ್.ಟಿ.ಎಸ್.ಸಿ.-1, ಹಾವೇರಿ.